# ಹುಚ್ಚು ಹಿಡಿಯಿತು ಎನಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** Lyrics mentioned without highlights are as per Ref. 1. The wordings given in yellow highlights are as per Ref. 2. The wordings in Ref. 3 are similar to Ref. 3 with few differences. They are not considered here.
5. **Note:** Singer has followed lyrics as in Ref. 1.

ರಾಗ: ಗೌಳಿಪಂತು ತಾಳ: ಆದಿ

ಹುಚ್ಚು ಹಿಡಿಯಿತು ಎನಗೆ, ಹುಚ್ಚು ಹಿಡಿಯಿತು || ಪ ||
ಅಚ್ಯುತನ ಧ್ಯಾನವೆಂಬೊ ಅಚ್ಚುಮೆಚ್ಚು ತಲೆಗೆ ಏರಿ || ಅಪ ||

ವಾಸುದೇವನೆಂಬ ನಾಮ ವದನದಲ್ಲಿ ಒದರುವೆ, ಮಾಯಾ
ಪಾಶವೆಂಬೊ ಅಂಗಿಯನ್ನು ಹರಿದು ಹರಿದು ಹಾಕುವೆ
ಕೇಶವನ ಹುವ್ವ ಮುಡಿದು ಕುಣಿದು ಕುಣಿದು ಆಡುವೆ, ಕೆಟ್ಟ
ದೋಷವೆಂಬೊ ಗೊಡೆಯನ್ನು ಕೆದರಿ ಕೆದರಿ ಹಾಕುವಂಥ || 1 ||

ಕೃಷ್ಣನಂಘ್ರಿ ಕಮಲದಲ್ಲಿ ಸೊರಗಿ ಸೊರಗಿ ಬೀಳುವೆ, ಭವ
ಕಷ್ಟವೆಂಬೊ ಕುಂಭವನ್ನು ಒಡೆದು ಒಡೆದು ಹಾಕುವೆ
ನಿಷ್ಟರನ್ನು ಕಂಡು ಅವರ ಹಿಂದೆ ಹಿಂದೆ ತಿರುಗುವೆ, ಕಡು
ದುಷ್ಟರನ್ನು ಕಂಡು ನಾನು ಕಲ್ಲು ಕಲ್ಲು ಬೀರುವಂಥ || 2 ||

ಮಂದ ಮತಿಗಳನ್ನು ಕಂಡು ಮೂಕನಾಗಿ ಇರುವೆ, ಹರಿಯ
ನಿಂದೆ ಮಾಡಿದವನ ಮೇಲೆ ಮಣ್ಣು ಮಣ್ಣು ಚೆಲ್ಲುವೆ

ಬಂಧು ಬಳಗದವರೊಳುದಾಸೀನನಾಗಿ ಬಾಳುವೆ, ಎನ್ನ
ತಂದೆ ಪುರಂದರ ವಿಠಲನ್ನ ನೆನೆದು ಕುಣಿದು ಆಡುವೆ || 3 ||

**Note:** The lyrics given below in yellow highlights are as per Ref. 2 above.

ರಾಗ: ಪೂರ್ವಿ ತಾಳ: ರೂಪಕ

ಹುಚ್ಚು ಹಿಡಿಯಿತೊ ಎನಗೆ, ಹುಚ್ಚು ಹಿಡಿಯಿತು || ಪ ||
ಅಚ್ಯುತನ ನಾಮವೆಂಬ ಮೆಚ್ಚು ಮದ್ದು ತಲೆಗೆ ಏರಿ || ಅಪ ||

ವಾಸುದೇವನೆಂಬ ನಾಮ ವದನದಲ್ಲಿ ಒದರುವೆ, ಮಾಯಾ
ಪಾಶವೆಂಬ ಬಲೆಯ ಹರಿದು ಹರಿದು ಬಿಸುಡುವೆ
ಕೇಶವನ ಹುವ್ವ ಎನ್ನ ಮುಡಿಗೆ ಮುಡಿಸುವೆ ಭವದ
ಕ್ಲೇಶವೆಂಬ ಗೊಡೆಯನ್ನು ಕೆದರಿ ಕೆದರಿ ಬಿಸುಡುವಂಥ || ೧ ||

ಕೃಷ್ಣನಂಘ್ರಿ ಕಮಲಗಳಲಿ ನಲಿದು ನಲಿದು ಬೀಳುವೆ, ಭವ
ಕಷ್ಟವೆಂಬ ಕುಂಭಗಳನು ಒಡೆದು ಒಡೆದು ಹಾಕುವೆ
ನಿಷ್ಟರನ್ನು ಕಂಡವರ ಹಿಂದೆ ಹಿಂದೆ ತಿರುಗುವೆ,
ಭ್ರಷ್ಟ ಮನುಜರನ್ನು ಕಂಡು ನಾನು ಕಲ್ಲು ಕಲ್ಲಿಕ್ಕುವಂಥ || ೨ ||

ಮಂದ ಮತಿಗಳನ್ನು ಕಂಡರೆ ಮೂಕನಾಗುವೆನು, ಹರಿಯ
ನಿಂದೆ ಮಾಡುವವರ ಮೇಲೆ ಮಣ್ಣು ಚೆಲ್ಲುವೆ
ಮಂದರಾದ್ರಿ ಧರನ ದಿನದೊಳನಶನನಾಗುವೆ ಎನ್ನ
ತಂದೆ ಪುರಂದರ ವಿಠಲನ ಪೊಗಲಿ ಪಾಡಿ ಆಡುವಂಥ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಕ್ತಿಯೆನ್ನುವುದು ರಸಾಭಿವ್ಯಕ್ತಿಯಲ್ಲಿ ಉನ್ಮಾದವೂ ಆದೀತು. ದಿವ್ಯೋನ್ಮಾದದ ಅನುಭವವನ್ನು ದಾಸರು ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

**ಮದ್ದು** – ಮದವೇರಿಸುವಂಥ ದ್ರವ್ಯ.

**ವದನದಲಿ** – ಬಾಯಲ್ಲಿ.

**ಅಂಗಿ** – ಜೀವಕ್ಕೆ ಇರುವ ಮಾಯಾವರಣ, ಕರ್ಮಾವರಣ.

**ಕ್ಲೇಶ** – ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶಗಳೆಂಬ ಐದು ಕ್ಲೇಶಗಳು.

**ಗೋಡೆ** – ಸ್ವರೂಪಜ್ಞಾನಕ್ಕೆ ಪ್ರತಿಬಂಧಕವಾದ ಸಾಮಗ್ರಿ.

**ಜರಿದು** – ಸರಿದು, ಕಾಲುಜಾರಿಬಿದ್ದು.

**ಮಂದಮತಿಗಳನ್ನು...** – 'ನ ಬುದ್ಧಿಭೇದಂ ಜನಯೇದಜ್ಞಾನಾಂ' ಎಂದಿರುವುದರಿಂದ.

**ಮೆಚ್ಚು ಮದ್ದು** = ಒಲಿಸಿಕೊಳ್ಳುವ ಔಷದ

**ಮಂದರಾದ್ರಿ ಧರನ ದಿನ** = ಏಕಾದಶಿ

**ಅನಶನ** = ಉಪವಾಸ

**Classification:** Keerthane
**Ankita:** tande purandara vittala
**Location:** NA
**Category:** Nama Mahatme, Artha Bhava
**Sub-Category:** huchha, achyuta, dhyAna, anghri, keshava, hoovu, ATa, Krishna, padma, bhava, kallu, bandhu, upavasa, Ekadashi
**Pravachana:** NA
**Explanation:** NA